**ದಿಃ 28.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಮುಖ್ಯ ವಿಚಾರಣೆಃ 5ನೇ ಪ್ರತಿವಾದಿ ಪರ ಶ್ರೀ ಎಂ ಡಿ ಎಂ ವಕೀಲರಿಂದಃ

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯ ಮತ್ತು ಸರಿ ಇದ್ದು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದು ನುಡಿದಿದ್ದಾರೆ.

ನನ್ನ ಪರವಾಗಿ ದಿನಾಂಕ 17.11.2009ರ ಕ್ರಯ ಪತ್ರದ ಮೂಲ ಪ್ರತಿ ಹಾಜರುಮಾಡಿದ್ದು ಅದನ್ನು ನಿಡಿ-7 ಎಂದು, ನಕಾಶೆ ಹಾಜರುಮಾಡಿದ್ದು ಅದನ್ನು ನಿಡಿ-8 ಎಂದು, ಟೈಟಲ್ ಇನ್ವೆಸ್ಟಿಗೇಶನ್ ರಿಪೋರ್ಟ್ ಹಾಜರುಮಾಡಿದ್ದು ಅದನ್ನು ನಿಡಿ-9 ಎಂದು, ಶೇರ್ ಸರ್ಟಿಫಿಕೇಟ್ ಹಾಜರುಮಾಡಿದ್ದು ಅದನ್ನು ನಿಡಿ-10 ಎಂದು, ಡೆಲಿವರಿ ರಿಪೋರ್ಟ್ ನ ಯಥಾ ನಕಲು ಹಾಜರುಮಾಡಿದ್ದು ಅದನ್ನು ನಿಡಿ-11 ಎಂದು, ಜ್ಯಾರಿ ಪ್ರಕರಣ ಸಂಖ್ಯೆಃ 50/2007ರ ಆದೇಶ ಪುಟದ ಯಥಾ ನಕಲು ಹಾಜರುಮಾಡಿದ್ದು ಅದನ್ನು ನಿಡಿ-12 ಎಂದು, ಅಸಲು ದಾವಾ ಸಂಖ್ಯೆಃ 271/1997ರ ಡಿಕ್ರಿ ಯಥಾ ನಕಲು ಹಾಜರುಮಾಡಿದ್ದು ಅದನ್ನು ನಿಡಿ-13 ಎಂದು, ಎಫ್.ಡಿ.ಪಿ. ಸಂಖ್ಯೆಃ 6/2001ರ ಡಿಕ್ರಿಯ ಯಥಾನಕಲು ಹಾಜರುಮಾಡಿದ್ದು ಅದನ್ನು ನಿಡಿ-14 ಎಂದು, ದಿನಾಂಕ 27.10.1975ರ ಕ್ರಯಪತ್ರ ಹಾಜರುಮಾಡಿದ್ದು ಅದನ್ನು ನಿಡಿ-15 ಎಂದು, ದಿ 14.10.1997ರ ಹಕ್ಕು ಖುಲಾಸೆ ಪತ್ರದ ಮೂಲ ಪ್ರತಿ ಹಾಜರುಮಾಡಿದ್ದು ಅದನ್ನು ನಿಡಿ-16 ಎಂದು, ರಸೀದಿ ಹಾಜರುಮಾಡಿದ್ದು ಅದನ್ನು ನಿಡಿ-17 ಎಂದು, 2 ಋಣಬಾರ ಪತ್ರ ಹಾಜರುಮಾಡಿದ್ದು ಅವುಗಳನ್ನು ನಿಡಿ-18 ಮತ್ತು 19 ಎಂದು, ಪಹಣಿ ಪತ್ರಿಕೆ ಹಾಜರುಮಾಡಿದ್ದು ಅದನ್ನು ನಿಡಿ-20 ಎಂದು, ಭೂ ಪರಿವರ್ತನೆ ಆದೇಶ ವಹಿಯ ಯಥಾ ನಕಲು ಹಾಜರುಮಾಡಿದ್ದು ಅದನ್ನು ನಿಡಿ-21 ಎಂದು, ಗುರುತಿಸಲಾಯಿತು.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಗಿರುತ್ತದೆ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**